## ಪ್ರಕಟಣೆ

ಸಂಖ್ಯೆ:ಮಾನಿಮ 310 ಆಡಎ 07 600 ದಿನಾಂಕ:5-6-2008

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 'ಬಿ' ಮತ್ತು 'ಸಿ' ಗುಂಪಿನ ಹುದ್ದೆಗಳಿಗೆ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಅಧಿಸೂಚನೆಯೊಂದಿಗೆ ನೀಡಿರುವ ಅರ್ಜಿಯ ನಮೂನೆಯನ್ನು ಬೆರಳಚ್ಚು ಮಾಡಿಸಿ ಅಥವಾ ಮಂಡಳಿಯ ವೆಬ್‌ಸೈಟ್‌ನಿಂದ ಪಡೆದುಕೊಂಡು ಅರ್ಜಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರ ಹೆಸರಿಗೆ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಹುದ್ದೆಗಳ ಮುಂದೆ ಸೂಚಿಸಿರುವ ಮೊತ್ತಕ್ಕೆ ಡಿ.ಡಿ.ಯನ್ನು (ಪ.ಜಾ./ಪ.ಪಂ./ಪ್ರವರ್ಗ-I ಪ್ರವರ್ಗದಲ್ಲಿ ಬರುವ ಅಭ್ಯರ್ಥಿಗಳಿಗೆ ಶುಲ್ಕ 50% ಪಾವತಿಸತಕ್ಕದ್ದು) ಭರ್ತಿ ಮಾಡಿದ ಅರ್ಜಿಗಳೊಂದಿಗೆ ಅಧ್ಯಕ್ಷರು, ನೇಮಕಾತಿ ಸಮಿತಿ, ಕ.ರಾ.ಮಾ.ನಿ.ಮಂ., ಪರಿಸರ ಭವನ, 4ನೇ ಮಹಡಿ, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು-5600 01 ಇಲ್ಲಿಗೆ ದಿನಾಂಕ:30-6-2008 ಸಂಜೆ 5-00 ಗಂಟೆಯ ಒಳಗೆ ಅಥವಾ ಮುಂಚಿತವಾಗಿ ತಲುಪುವಂತೆ ನೊಂದಾಯಿತ ಅಂಚೆ ಮೂಲಕ ಸಲ್ಲಿಸುವುದು. ಅರ್ಜಿಗಳನ್ನು ಮುದ್ದಾಂ ಸ್ವೀಕರಿಸಲಾಗುವುದಿಲ್ಲ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವಿದ್ಯಾರ್ಹತೆ | ಆಯ್ಕೆ | ವೇತನ ಶ್ರೇಣಿ | ವರ್ಗೀಕರಣ<br>ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 08 ಸೆಹಿಮ 95 ದಿನಾಂಕ:20-6-95 ಮತ್ತು<br>ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 97 ಸೆನೆನಿ 2002 ದಿನಾಂಕ:22-11-2002 | | | | | | | | | ಶುಲ್ಕ |
|---|---|---|---|---|---|---|---|---|---|---|---|---|---|---|---|
| | | | | | | ಮೀಸಲಾತಿ | ಪ.ಜಾತಿ | ಪ.ಪಂ | ಸಾಮಾನ್ಯ | ಪ್ರವರ್ಗ 1 | ಪ್ರವರ್ಗ 2ಎ | ಪ್ರವರ್ಗ 2ಬಿ | ಪ್ರವರ್ಗ 3ಎ | ಪ್ರವರ್ಗ 3ಬಿ | |
| 1 | ಸಹಾಯಕ ಪರಿಸರ ಅಧಿಕಾರಿ | 30 | ಅಭ್ಯರ್ಥಿಗಳು ಈ ಕೆಳಕಂಡ ವಿದ್ಯಾರ್ಹತೆಯನ್ನು ಪ್ರಥಮ ದರ್ಜೆಯಲ್ಲಿ ಪಡೆದಿರಬೇಕು<br>i) ಎಂ.ಎಸ್‌ಸಿ (ಎನ್ವಿರಾನ್‌ಮೆಂಟಲ್ ಸೈನ್ಸ್) ಅಥವಾ<br>ii) ಎಂ.ಎಸ್‌ಸಿ (ಕೆಮಿಸ್ಟ್ರಿ/ಬಯೋ-ಕೆಮಿಸ್ಟ್ರಿ) ಅಥವಾ<br>iii) ಎಂ.ಎಸ್‌ಸಿ (ಮೈಕ್ರೊಬಯೋಲಜಿ)<br>iv) ಯಾವುದೇ ತಾಂತ್ರಿಕ ವಿಷಯದ ಇಂಜನಿಯರಿಂಗ್ ಪದವಿಯೊಂದಿಗೆ ಎಂ.ಇ./ಎಂ.ಟೆಕ್, ಪಿ.ಹೆಚ್.ಇ. ಎನ್ವಿರಾನ್‌ಮೆಂಟ್ ಅಥವಾ ಇನ್‌ಡಸ್ಟ್ರಿಯಲ್ ಪಲ್ಯೂಷನ್ ಕನ್‌ಟ್ರೋಲ್<br>V) ಬಿ.ಇ. (ಸಿವಿಲ್ ಎನ್ವಿರಾನ್‌ಮೆಂಟಲ್) ಮತ್ತು ಬಿ.ಇ. (ಎನ್ವಿರಾನ್‌ಮೆಂಟಲ್)<br>vi) ಬಿ.ಇ. (ಸಿವಿಲ್) ಪದವಿಯಲ್ಲಿ ಎನ್ವಿರಾನ್‌ಮೆಂಟಲ್ ಇಂಜನಿಯರಿಂಗ್‌ನ ಯಾವುದಾದರು ಎರಡು ಐಚ್ಛಿಕ ವಿಷಯಗಳನ್ನು ಒಳಗೊಂಡಿರಬೇಕು.<br>vii) ಬಿಇ / ಬಿ.ಟೆಕ್ (ಕೆಮಿಕಲ್) | ಅಭ್ಯರ್ಥಿಯ ಅಂತಿಮ ಆಯ್ಕೆಯು ಆತನ ವಿದ್ಯಾರ್ಹತೆಯನ್ನಾಧರಿಸುತ್ತದೆ (ಮೆರಿಟ್). ನೇರ ನೇಮಕಾತಿಯ ಮುಖಾಂತರ ಕ್ರಮಾಂಕ i ರಿಂದ iii ರವರೆಗಿನ ಯಾವುದಾದರು ಒಂದು ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಗೆ ಒಟ್ಟು ಹುದ್ದೆಗಳ 33 1/3 % ರಷ್ಟನ್ನು ಕಾಯ್ದಿರಿಸಿ ನೇರ ನೇಮಕಾತಿಯ ಮುಖಾಂತರ ಆಯ್ಕೆ ಮಾಡಲಾಗುವುದು. ಇದರೊಂದಿಗೆ ಕ್ರಮಾಂಕ iv ರಿಂದ vii ರವರೆಗಿನ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಗೆ ಒಟ್ಟು ಹುದ್ದೆಗಳ 66 2/3 % ರಷ್ಟನ್ನು ಕಾಯ್ದಿರಿಸಿ ನೇರ ನೇಮಕಾತಿಯ ಮುಖಾಂತರ ಆಯ್ಕೆ ಮಾಡಲಾಗುವುದು. | 11400-21600 | ಇತರೆ | 2 | 1 | 4 | 1 | 2 | 1 | 1 | 1 | 300/-<br>150/- ಪ.ಜಾ./ ಪ.ಪಂ./ ಪ್ರವರ್ಗ-I ರವರಿಗೆ |
| | | | | | | ಮಹಿಳೆ | 1 | – | 5 | – | 1 | 1 | – | 1 | |
| | | | | | | ಗ್ರಾಮೀಣ | 1 | – | 4 | – | 1 | – | – | – | |
| | | | | | | ಮಾ.ಸೈ. | – | – | 1 | – | – | – | – | – | |
| | | | | | | ಕ.ಮಾ.ಅ. | – | – | 1 | – | – | – | – | – | |
| | | | | | | **ಒಟ್ಟು** | 4 | 1 | 15 | 1 | 4 | 2 | 1 | 2 | |
| 2 | **ಕಾನೂನು ಸಹಾಯಕರು** | 3 | ಯಾವುದೇ ಪದವಿಯೊಂದಿಗೆ ಕಾನೂನು ಪದವಿ ಪಡೆದಿರಬೇಕು ಅಥವಾ ಕಾನೂನು ವಿಷಯದಲ್ಲಿ ಸರ್ಕಾರದಿಂದ ಅಂಗೀಕೃತಗೊಂಡಿರುವ ವಿಶ್ವವಿದ್ಯಾನಿಲಯದಿಂದ/ ಸಂಸ್ಥೆಯಿಂದ ಪದವಿ ಪಡೆದಿರಬೇಕು. | | 11400-21600 | ಇತರೆ | 1 | 1 | 1 | -- | -- | -- | -- | -- | 300/-<br>150/- ಪ.ಜಾ./ ಪ.ಪಂ./ ಪ್ರವರ್ಗ-I ರವರಿಗೆ |
| | | | | | | **ಒಟ್ಟು** | 1 | 1 | 1 | -- | -- | -- | -- | -- | |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 3 | ವೈಜ್ಞಾನಿಕ ಸಹಾಯಕ (ಪ್ರಯೋಗಾಲಯ) | 20 | ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರದಲ್ಲಿ ವಿಜ್ಞಾನದ ಪದವಿ ಪಡೆದಿರಬೇಕು. ಗಣಕಯಂತ್ರ ನಿರ್ವಹಣೆಯಲ್ಲಿ (DOS, Windows, MS-Office and Internet) ಜ್ಞಾನ ಪಡೆದಿರಬೇಕು. | | 8000-14800 | ಇತರೆ | 1 | -- | 3 | 1 | 2 | -- | 1 | 1 | 200/- 100/- ಪ.ಜಾ./ ಪ.ಪಂ./ ಪ್ರವರ್ಗ-I ರವರಿಗೆ |
| | | | | | | ಮಹಿಳೆ | 1 | -- | 3 | -- | 1 | -- | -- | -- | |
| | | | | | | ಗ್ರಾಮೀಣ | 1 | -- | 3 | -- | 1 | -- | -- | -- | |
| | | | | | | ಮಾ.ಸೈ. | -- | -- | 1 | -- | -- | -- | -- | -- | |
| | | | | | | **ಒಟ್ಟು** | **3** | **--** | **10** | **1** | **4** | **--** | **1** | **1** | |
| 4 | ಶೀಘ್ರಲಿಪಿಗಾರ | 3 | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಹಾಗು ಕರ್ನಾಟಕ ಪ್ರೌಡ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕನ್ನಡ ಮತ್ತು ಇಂಗ್ಲಿಷ್ ಶೀಘ್ರಲಿಪಿಯ ಹಿರಿಯ ದರ್ಜೆ ಪರೀಕ್ಷೆ ಹಾಗೂ ಕನ್ನಡ ಮತ್ತು ಇಂಗ್ಲಿಷ್ ಬೆರಳಚ್ಚಿನಲ್ಲಿ ಹಿರಿಯ ದರ್ಜೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. ಗಣಕಯಂತ್ರ ನಿರ್ವಹಣೆಯಲ್ಲಿ (DOS, Windows, MS-Office and Internet) ಜ್ಞಾನ ಪಡೆದಿರಬೇಕು. | | 7275-13350 | ಇತರೆ | -- | -- | 1 | 1 | -- | -- | -- | -- | 100/- 50/- ಪ.ಜಾ./ ಪ.ಪಂ./ ಪ್ರವರ್ಗ-I ರವರಿಗೆ |
| | | | | | | ಮಹಿಳೆ | -- | -- | 1 | -- | -- | -- | -- | -- | |
| | | | | | | **ಒಟ್ಟು** | **--** | **--** | **2** | **1** | **--** | **--** | **--** | **--** | |
| 5 | ಬೆರಳಚ್ಚುಗಾರ | 20 | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಹಾಗು ಕರ್ನಾಟಕ ಪ್ರೌಡ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕನ್ನಡ ಮತ್ತು ಇಂಗ್ಲಿಷ್ ಬೆರಳಚ್ಚಿನಲ್ಲಿ ಹಿರಿಯ ದರ್ಜೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು. ಗಣಕಯಂತ್ರ ನಿರ್ವಹಣೆಯಲ್ಲಿ (DOS, Windows, MS-Office and Internet) ಜ್ಞಾನ ಪಡೆದಿರಬೇಕು. | | 5800-10500 | ಇತರೆ | 1 | 1 | 3 | 1 | 1 | 1 | 1 | 1 | 100/- 50/- ಪ.ಜಾ./ ಪ.ಪಂ./ ಪ್ರವರ್ಗ-I ರವರಿಗೆ |
| | | | | | | ಮಹಿಳೆ | 1 | -- | 3 | -- | 1 | -- | -- | -- | |
| | | | | | | ಗ್ರಾಮೀಣ | 1 | -- | 3 | -- | -- | -- | -- | -- | |
| | | | | | | ಮಾ.ಸೈ. | -- | -- | 1 | -- | -- | -- | -- | -- | |
| | | | | | | **ಒಟ್ಟು** | **3** | **1** | **10** | **1** | **2** | **1** | **1** | **1** | |
| 6 | ಕ್ಷೇತ್ರ ಸಹಾಯಕ | 12 | ಪಿ.ಯು.ಸಿ.(ವಿಜ್ಞಾನ) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಗಣಕಯಂತ್ರ ನಿರ್ವಹಣೆಯಲ್ಲಿ (DOS, Windows, MS-Office and Internet) ಜ್ಞಾನ ಪಡೆದಿರಬೇಕು. | | 5800-10500 | ಇತರೆ | 1 | -- | 2 | -- | 1 | 1 | 1 | 1 | 100/- 50/- ಪ.ಜಾ./ ಪ.ಪಂ./ ಪ್ರವರ್ಗ-I ರವರಿಗೆ |
| | | | | | | ಮಹಿಳೆ | 1 | -- | 2 | -- | -- | -- | -- | -- | |
| | | | | | | ಗ್ರಾಮೀಣ | -- | -- | 2 | -- | -- | -- | -- | -- | |
| | | | | | | **ಒಟ್ಟು** | **2** | **--** | **6** | **--** | **1** | **1** | **1** | **1** | |
| **1. ಮಾ.ಸೈ. - ಮಾಜಿ ಸೈನಿಕ 2. ಕ.ಮಾ.ಅ. - ಕನ್ನಡ ಮಾಧ್ಯಮ ಅಭ್ಯರ್ಥಿ** | | | | | | | | | | | | | | | |

**ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್‌ಗಳ ಅಥವಾ ಎಲ್ಲಾ ವರ್ಷಗಳ ವಿಶ್ವವಿದಯಾನಿಲಯದ ಪರೀಕ್ಷೆಯಲ್ಲಿ ಗಳಿಸಿದ ಸರಾಸರಿ ಅಂಕಗಳ ಮೇಲೆ ಮೆರಿಟ್ ನಿರ್ಧರಿಸಲಾಗುವುದು. ಆಯ್ಕೆಯು ಅರ್ಹತೆಯನ್ನು ಹೊಂದಲು ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಗಳಿಸಿರುವ ಶೇಕಡ ಅಂಕಗಳ ಆಧಾರದ ಮೇಲೆ ಮೆರಿಟ್ ನಿರ್ಧರಿಸಲಾಗುವುದು.**

1. ಅರ್ಜಿಗಳನ್ನು ನೊಂದಾಯಿತ ಅಂಚೆ (Register Post) ಮುಖಾಂತರ ಮಾತ್ರ ಕಳುಹಿಸತಕ್ಕದ್ದು. ಖುದ್ದಾಗಿ ಸ್ವೀಕರಿಸಲಾಗುವುದಿಲ್ಲ.
2. ಪರೀಕ್ಷಾರ್ಥ ಅವಧಿಯಲ್ಲಿ ಮಂಡಳಿ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಹಾಗು ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.
3. **ವಯೋಮಿತಿ**: ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂದು ಕೆಳಕಂಡ ವಯೋಮಿತಿ ಹೊಂದತಕ್ಕದ್ದು.

| | | |
|---|---|---|
| ಪ.ಜಾ/ಪ.ಪಂ/ಪ್ರವರ್ಗ-1 | : | ಕನಿಷ್ಠ - 18, ಗರಿಷ್ಠ - 38 ವರ್ಷಗಳು |
| ಪ್ರವರ್ಗII(ಎ)/II(ಬಿ)/III(ಎ)/III(ಬಿ) | : | ಕನಿಷ್ಠ - 18, ಗರಿಷ್ಠ - 36 ವರ್ಷಗಳು |
| ಸಾಮಾನ್ಯ ವರ್ಗ | : | ಕನಿಷ್ಠ - 18, ಗರಿಷ್ಠ - 33 ವರ್ಷಗಳು |

4. ಈ ಅಧಿಸೂಚನೆಯಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ಬೆಂಗಳೂರು ದಿನಾಂಕ:31-3-2006ರ ಅನ್ವಯ ನಿಗದಿತ ವಂತಿಗೆ ಪಿಂಚಣಿ ಯೋಜನೆ (Contributory pension Scheme) ಹೊಂದುತ್ತಾರೆ.
5. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಜಯನ್ನು ಮಂಡಳಿಯ ವೆಬ್‌ಸೈಟ್ http://kspcb.kar.nic.in. ಯಿಂದ Download ಮಾಡಿಕೊಳ್ಳುವುದು. ಅರ್ಜಿಗಳನ್ನು ಮಂಡಳಿಯಿಂದ ಒದಗಿಸಲಾಗುವುದಿಲ್ಲ. ಲಕೋಟೆಯ ಮೇಲೆ ಅರ್ಜಿ ಸಲ್ಲಿಸುವ ಹುದ್ದೆಯ ಹೆಸರು ನಮೂದಿಸಿರಬೇಕು. ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
6. ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಯನ್ನು ತಮ್ಮ ಇಲಾಖಾ ಮುಖ್ಯಸ್ಥರ ಮುಖಾಂತರ ಸಲ್ಲಿಸುವುದು
7. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವೊಂದನ್ನು ಅರ್ಜಿಯ ಬಲಗಡೆ ಮೇಲ್ಭಾಗದಲ್ಲಿ ಅಂಟಿಸತಕ್ಕದ್ದು.
8. ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿಯನ್ನು ಸಲ್ಲಿಸ ಬಯಸುವ ಅಭ್ಯರ್ಥಿಗಳು ಪ್ರತ್ಯೇಕ ಅರ್ಜಿಯನ್ನು ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.
9. ಜಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು ಮತ್ತು ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.
10. ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನಗಳನ್ನು ನೇಮಕಾತಿ ಪ್ರಾಧಿಕಾರಿಯಾದ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರು ಕಾಯ್ದಿರಿಸಿಕೊಂಡಿರುತ್ತಾರೆ.
11. ಅಭ್ಯರ್ಥಿಯು ಡಿ.ಡಿ.ಯನ್ನು ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಹೆಸರಿಗೆ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು ಮತ್ತು ಡಿ.ಡಿ.ಗಳನ್ನು ಯಾವುದಾದರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ಖರೀದಿಸತಕ್ಕದ್ದು. ಡಿ.ಡಿ.ಯ ಹಿಂದೆ ಹೆಸರು ಮತ್ತು ವಿಳಾಸವನ್ನು ನಮೂದಿಸತಕ್ಕದ್ದು.
12. ಸಹಿ ಮಾಡದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ
13. ಅಂಚೆ ವಿಳಂಬಕ್ಕೆ ಮಂಡಳಿಯು ಜವಾಬ್ದಾರರಾಗುವುದಿಲ್ಲ.
14 ಮೀಸಲಾತಿ ಸೌಲಭ್ಯ ಅಪೇಕ್ಷಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ರೆವೆನ್ಯೂ ಪ್ರಾಧಿಕಾರದಿಂದ ಪಡೆದು ಲಗತ್ತಿಸಬೇಕು.
   i) ಪ.ಜಾ./ಪ.ಪಂ.,ಪ್ರವರ್ಗ-1 : ಸರ್ಕಾರದ ಅಧಿಸೂಚನೆ SWD.132.SAD 97 dt:8-2-2000 ಕ್ರಮವಾಗಿ ನಮೂನೆ 1 ಹಾಗು 2
   ii) ಪ್ರವರ್ಗ 2ಎ, 2ಬಿ, 3ಎ, 3ಬಿ : ಸರ್ಕಾರದ ಅಧಿಸೂಚನೆ SWD.126 BCA dt:13-12-2003 ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದ ಮೀಸಲಾತಿ ತಿದ್ದುಪಡಿ) ನಿಯಮಗಳು 2000ರ ಅನ್ವಯ ನಮೂನೆ-3) ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರಬೇಕು.
15. ಮಾಜಿ ಸೈನಿಕರ ಕುಟುಂಬದ ಅಭ್ಯರ್ಥಿಗಳ ವಯೋಮಿತಿ ಸಡಿಲಿಕೆ: ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸುತ್ತಿದ್ದ ಎಂಬ ಬಗ್ಗೆ ಅಥವಾ ಭಾರತ ದೇಶದ ಒಕ್ಕೂಟದ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುತ್ತಿರುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ಅಂಗಹೀನನಾದ ವ್ಯಕ್ತಿಗಳ ಕುಟುಂಬದ ಸದಸ್ಯರು ಎಂಬ ಬಗ್ಗೆ ಸಕ್ಷಮ ಮಿಲಿಟರಿ ಅಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.
16. ಗ್ರಾಮೀಣ ಅಭ್ಯರ್ಥಿ ಎಂದರೆ, ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ. ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪದಾಧಿಕಾರಿಯಿಂದ ದೃಢೀಕೃತ ಗ್ರಾಮೀಣ ಪತ್ರವನ್ನು ಲಗತ್ತಿಸತಕ್ಕದ್ದು.
17. ಕನ್ನಡ ಮಾಧ್ಯಮ ಅಭ್ಯರ್ಥಿಗಳು: ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 71 ಎಸ್‌ಆರ್‌ಆರ್ 2002 ದಿನಾಂಕ:24-10-2002ರಲ್ಲಿ ಹೊರಡಿಸಿದ ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ (9)(1)(ಸಿ)ರ ಅನ್ವಯ ಅಭ್ಯರ್ಥಿಯು 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲಾ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.
18. ಕೆಳಕಂಡ ಸ್ವದೃಢೀಕರಿಸಿದ ದಾಖಲೆಗಳ ಪ್ರತಿಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಿದೆಯೋ ಎಂದು ಖಚಿತಪಡಿಸಿಕೊಳ್ಳುವುದು:
   i. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು
   ii. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ
   iii. ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)
   iv. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಗಳ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
   v. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
   vi. ಕನ್ನಡ ಮಾಧ್ಯಮ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
19. ಅಭ್ಯರ್ಥಿಗಳು ಅರ್ಜಿಯೊಂದಿಗೆ ಯಾವುದೇ ಮೂಲ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದಲ್ಲ.

ಮೇಲ್ಕಂಡಂತೆ ನಿಗದಿಪಡಿಸಿದ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ಹಾಗು ನಿಗದಿತ ಮೊತ್ತದ ಡಿ.ಡಿ.ಯನ್ನು ಲಗತ್ತಿಸದಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಭ್ಯರ್ಥಿಯು ತನ್ನ ಆಯ್ಕೆಯ ವಿಷಯದಲ್ಲಿ ಯಾವುದೇ ರೀತಿಯ ಪ್ರಭಾವ ಬೀರಲು ಪ್ರಯತ್ನಿಸಿದಲ್ಲಿ ಆತನನ್ನು ಅನರ್ಹಗೊಳಿಸಲಾಗುವುದು. ಈ ನೇಮಕಾತಿ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ವಿವರ ಅಥವಾ ಸ್ಪಷ್ಟೀಕರಣಕ್ಕೆ ಈ ಕೆಳಗೆ ನಮೂದಿಸಿರುವ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸುವುದು. (080)25589112, (080) 25589113, (080)25581383, (080)25586520

ಸಹಿ/-

**ಮುಖ್ಯ ಆಡಳಿತಾಧಿಕಾರಿ ಮತ್ತು ಸಭೆಯ ಸಮಾವೇಶಕರು**

**ಕರ್ನಾಟಕ ರಾಜ್ಯ ಮಾಲಿನ ನಿಯಂತ್ರಣ ಮಂಡಳಿ**

**ನೇರ ನೇಮಕಾತಿಗಾಗಿ ಅರ್ಜಿ ನಮೂನೆ**

ಪ್ರಕಟಣೆ ಸಂಖ್ಯೆ:.............................................

ಜಾಹೀರಾತು ಹೊರಡಿಸಿದ ದಿನಾಂಕ:.........................

ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರು:...................

(ಸ್ವದೃಢೀಕರಿಸಿದ) ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಇಲ್ಲಿ ಅಂಟಿಸಿ

| ಡಿ.ಡಿ.ಪಡೆದ ಬ್ಯಾಂಕ್‌ನ ಹೆಸರು | ಸಂದಾಯ ಮಾಡಿದ ಮೊತ್ತ | ಡಿ.ಡಿ.ಸಂಖ್ಯೆ ಮತ್ತು ದಿನಾಂಕ: |
|---|---|---|
| | | |

1. ಅರ್ಜಿದಾರನ/ಳ ಪೂರ್ಣ ಹೆಸರು:
2. ತಂದೆ/ಗಂಡನ ಹೆಸರು:
3. ಖಾಯಂ ವಿಳಾಸ :
4. ಹುಟ್ಟಿದ ದಿನಾಂಕ ಹಾಗು ವಯಸ್ಸು :
5. ಲಿಂಗ: ಪುರುಷ [ ] ಮಹಿಳೆ [ ]
6. ರಾಷ್ಟ್ರೀಯತೆ:
7. ಮೀಸಲಾತಿ ಕೋರಿದ್ದಲ್ಲಿ: ಅನ್ವಯಿಸುವ ಬಾಕ್ಸ್‌ನಲ್ಲಿ ಗುರುತು ಹಾಕಿ (ದೃಢೀಕರಣ ಪ್ರಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು)
   ಅ) ಪ.ಜಾ/ಪ..ಪಂ. ದವರೇ [ ] ಪ.ಜಾತಿ [ ] ಪ.ಪಂಗಡ [ ] ಉಪ ಜಾತಿ ನಮೂದಿಸಬೇಕು
   ಆ) ಹಿಂದುಳಿದ ವರ್ಗದವರಿಗೆ [ ] ಪ್ರ-1 [ ] 2ಎ [ ] 2ಬಿ [ ] 3 ಎ [ ] 3ಬಿ [ ] ಉಪ ಜಾತಿ ನಮೂದಿಸಬೇಕು
   ಇ) ಸಾಮಾನ್ಯ ವರ್ಗದವರು [ ] ಹೌದು [ ] ಇಲ್ಲ
   ಈ) ಇತರೆ ಮೀಸಲಾತಿ [ ] ಗ್ರಾಮೀಣ [ ] ಮಾ.ಸೈ [ ] ಕನ್ನಡ ಮಾಧ್ಯಮ
8. ವಿದ್ಯಾರ್ಹತೆ:

| ವಿದ್ಯಾರ್ಹತೆ | ವರ್ಷ (ಉತ್ತೀರ್ಣ) | ಒಟ್ಟು ಅಂಕಗಳು | ಗಳಿಸಿದ ಅಂಕಗಳು | ಶೇಕಡ |
|---|---|---|---|---|
| | | | | |

**ಘೋಷಣಾ ಪತ್ರ :** ಈ ಮೇಲ್ಕಂಡ ಎಲ್ಲಾ ವಿವರಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ. ಸತ್ಯವಲ್ಲವೆಂದು ತಿಳಿದುಬಂದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸಬಹುದು ಹಾಗು ನನ್ನ ವಿರುದ್ಧ ಸಿವಿಲ್ / ಕ್ರಿಮಿನಲ್ ಮೊಕದ್ದಮೆ ಹೂಡಬಹುದು.

ಸ್ಥಳ:

ದಿನಾಂಕ: ಅರ್ಜಿದಾರನ/ಳ ಸಹಿ